ಕರ್ನಾಟಕ ವಿಧಾನ ಸಭೆ
ಹದಿನಾಲ್ಕನೇ ವಿಧಾನಸಭೆ
ಎಂಟನೇ ಅಧಿವೇಶನ

# ಕರ್ನಾಟಕ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳ (ಮಾರಾಟ ಬೆಲೆಯ ನಿಗದಿ ಮತ್ತು ಪರಿಹಾರದ ಸಂದಾಯ) ವಿಧೇಯಕ, 2015

**(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ – 35)**

ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳ ಮಾರಾಟ ಬೆಲೆಯನ್ನು ನಿಗದಿಪಡಿಸುವುದಕ್ಕಾಗಿ ಮತ್ತು ಅದರ ಬೆಳೆಯ ವೈಫಲ್ಯಕ್ಕಾಗಿ ಪರಿಹಾರವನ್ನು ಸಂದಾಯ ಮಾಡುವುದಕ್ಕಾಗಿ ಒಂದು ವಿಧೇಯಕ.

ರಾಜ್ಯದಲ್ಲಿ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳ ಬೆಲೆ ನಿಗದಿ ಮಾಡಲು ಮತ್ತು ಅಂಥ ಹತ್ತಿ ಬೀಜಗಳ ಮಾರಾಟ ಬೆಲೆಗಳನ್ನು ನಿಯಂತ್ರಿಸಲು ಯಾವುದೇ ಅವಕಾಶವಿಲ್ಲದಿರುವುದರಿಂದ;

ಮತ್ತು ರಾಜ್ಯದಲ್ಲಿನ ರೈತರ ಹಿತಾಸಕ್ತಿಯಲ್ಲಿ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳ ಮಾರಾಟ ಬೆಲೆಯನ್ನು ನಿಗದಿಪಡಿಸುವುದು ರಾಜ್ಯಕ್ಕೆ ಅತ್ಯಾವಶ್ಯಕವಾಗಿರುವುದರಿಂದ,

ಮತ್ತು ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳು ವೈಫಲ್ಯವಾದ ಸಂದರ್ಭದಲ್ಲಿ, ರೈತರಿಗೆ ಸೂಕ್ತವಾಗಿ ಪರಿಹಾರ ಒದಗಿಸುವ ಜವಾಬ್ದಾರಿಯನ್ನು ಸಂಬಂಧಪಟ್ಟ ಬೀಜ ಉತ್ಪಾದಕನ ಮೇಲೆ ಹೊರಿಸುವ ಮೂಲಕ ರೈತರಿಗೆ ಪರಿಹಾರ ಒದಗಿಸುವುದು ಯುಕ್ತವಾಗಿರುವುದರಿಂದ,

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು, ಅನ್ವಯ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳ (ಮಾರಾಟ ಬೆಲೆಯ ನಿಗದಿ ಮತ್ತು ಪರಿಹಾರದ ಸಂದಾಯ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಈ ಅಧಿನಿಯಮದಲ್ಲಿ ಉಪಬಂಧಿಸಿದುದನ್ನುಳಿದು, ಇದು,–

(ಎ) ಪ್ರತಿಯೊಬ್ಬ ಡೀಲರ್ ನಿಗೆ; ಮತ್ತು

(ಬಿ) ಆತನು ತನ್ನ ಸ್ವಂತ ಬಳಕೆಗಾಗಿ ಮತ್ತು ಮಾರಾಟಕ್ಕಾಗಿ ಅಲ್ಲದೇ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜವನ್ನು ಉತ್ಪಾದಿಸಿದಾಗ ಹೊರತುಪಡಿಸಿ,

ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜದ ಪ್ರತಿಯೊಬ್ಬ ಉತ್ಪಾದಕನಿಗೆ,

–ಅನ್ವಯವಾಗತಕ್ಕದ್ದು.

(3) ಇದು, ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) "ಫಸಲಿನ ಕಾರ್ಯಕ್ಷಮತೆ" ಎಂದರೆ, ಉತ್ಪಾದಕನು ಲೇಬಲಿನ ಮೇಲೆ ಕ್ಲೇಮು ಮಾಡಿರುವಂತೆ ಕಾರ್ಯಕ್ಷಮತೆಯ ಮೌಲ್ಯಮಾಪನಕ್ಕಾಗಿ ಪರಿಗಣಿಸಲಾದ ಯಾವುದೇ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜದ ಫಸಲಿನ ವಿಶಿಷ್ಟವೆನ್ನಬಹುದಾದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಲಕ್ಷಣಗಳು;

(2) "ಹತ್ತಿ ಬೀಜ" ಎಂದರೆ, ಯಾವುದೇ ವಿಧದ ಹತ್ತಿಬೀಜ ಮತ್ತು ಬಿತ್ತನೆಗೆ ಬಳಸಿದ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿಬೀಜದ ವೈವಿದ್ಯತೆಗಳನ್ನು ಒಳಗೊಳ್ಳುತ್ತದೆ;

(3) "ಸಮಿತಿ" ಎಂದರೆ, 9ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಜಿಲ್ಲಾ ಮಟ್ಟದ ತನಿಖಾ ಸಮಿತಿ;

(4) "ಕೃಷಿ ಆಯುಕ್ತ" ಎಂದರೆ, ಕೃಷಿ ಆಯುಕ್ತ ಎಂದು ಸರ್ಕಾರವು ನೇಮಕ ಮಾಡಿದ ಕೃಷಿ ಇಲಾಖೆಯ ಆಡಳಿತ ಮುಖ್ಯಸ್ಥ;

(5) "ಕೃಷಿ ನಿರ್ದೇಶಕರು" ಎಂದರೆ, ಕೃಷಿ ನಿರ್ದೇಶಕರು ಎಂದು ಸರ್ಕಾರವು ನೇಮಕ ಮಾಡಿದ ಕೃಷಿ ಇಲಾಖೆಯ ತಾಂತ್ರಿಕ ಮುಖ್ಯಸ್ಥ;

(6) "ರೈತ" ಎಂದರೆ, ತಾನಾಗಿಯೇ ಆಗಲಿ ಅಥವಾ ಯಾವೊಬ್ಬ ಇತರ ವ್ಯಕ್ತಿಯ ಮೂಲಕವಾಗಿಯಾಗಲೀ ಭೂಮಿಯನ್ನು ಸಾಗುವಳಿ ಮಾಡಿ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೆಳೆಯನ್ನು ಬೆಳೆಯುವ ಯಾವೊಬ್ಬ ವ್ಯಕ್ತಿ ಆದರೆ, ಬೀಜಗಳ ವಾಣಿಜ್ಯ ಸಂಗ್ರಹಣೆ ಮತ್ತು ಮಾರಾಟದಲ್ಲಿ ತೊಡಗಿರುವ ವ್ಯಕ್ತಿಗಳು, ಕಂಪನಿಗಳು, ವ್ಯಾಪಾರಿಗಳು, ಡೀಲರ್‌ನನ್ನು ಒಳಗೊಳ್ಳತಕ್ಕದ್ದಲ್ಲ;

(7) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ;

(8) "ತಪ್ಪಾಗಿ ಬ್ರ್ಯಾಂಡ್ ಆಗಿರುವುದು" ಎಂದರೆ,–

(i) ಇದನ್ನು ಯಾವ ಹೆಸರಿನಲ್ಲಿ ಮಾರಾಟ ಮಾಡಲಾಗಿದೆಯೋ ಆ ಹೆಸರಿನ ಅಡಿಯಲ್ಲಿ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜ ಇತರ ವೈವಿಧ್ಯಕ್ಕೆ ಬದಲಿಯಾಗಿ ಸೇರಿಸಿದ್ದರೆ ಅಥವಾ ವಂಚಿಸುವ ರೀತಿಯಲ್ಲಿ ಅದನ್ನು ಹೋಲುತ್ತಿದ್ದರೆ

ಮತ್ತು ಇದರ ನೈಜ ಸ್ವರೂಪವನ್ನು ಸೂಚಿಸುವಂತೆ ಸ್ಪಷ್ಟವಾಗಿ ಮತ್ತು ಎದ್ದುಕಾಣುವಂತೆ ಲೇಬಲ್ ಮಾಡಿರದಿದ್ದರೆ; ಅಥವಾ

(ii) ಯಾವುದೇ ಸ್ಥಳ ಅಥವಾ ದೇಶದ ಉತ್ಪಾದನೆಯೆಂದು ತಪ್ಪಾಗಿ ನಿರೂಪಿಸಲಾಗಿದ್ದರೆ; ಅಥವಾ

(iii) ಬೀಜದ ಮತ್ತೊಂದು ಬಗೆ ಅಥವಾ ವೈವಿಧ್ಯಕ್ಕೆ ಸೇರಿರುವ ಹೆಸರಿನ ಮೂಲಕ ಇದನ್ನು ಮಾರಾಟ ಮಾಡಿದ್ದರೆ; ಅಥವಾ

(iv) ಲೇಬಲ್‌ನ ಮೇಲೆ ಅಥವಾ ಅನ್ಯಥಾ ಇದಕ್ಕಾಗಿ ತಪ್ಪಾದ ಕ್ಲೇಮುಗಳನ್ನು ಮಾಡಲಾಗಿದ್ದರೆ; ಅಥವಾ

(v) ಡೀಲರನು ಅಥವಾ ಆತನ ಸೂಚನೆಯ ಮೇರೆಗೆ ಮೊಹರು ಮಾಡಲಾದ ಅಥವಾ ತಯಾರಿಸಲಾದ ಮತ್ತು ಆತನ ಹೆಸರನ್ನು ಮತ್ತು ವಿಳಾಸವನ್ನು ಹೊಂದಿರುವ ಪ್ಯಾಕೇಜಿನಲ್ಲಿ ಮಾರಾಟ ಮಾಡಿದಾಗ, ಪ್ರತಿಯೊಂದು ಪ್ಯಾಕೇಜಿನ ಒಳಾಂಶಗಳು ಈ ಅಧಿನಿಯಮದ ಅಡಿಯಲ್ಲಿ ನಿಯಮಿಸಲಾದ ವ್ಯತ್ಯಾಸ ಸಾಧ್ಯತೆ ಇರುವ(variability) ಮಿತಿಗಳೊಳಗೆ, ಅದರ ಹೊರಗಡೆ ಎದ್ದುಕಾಣುವಂತೆ ಮತ್ತು ಸರಿಯಾಗಿ ನಿರೂಪಿಸದಿದ್ದರೆ;

(vi) ಇದನ್ನು ಒಳಗೊಂಡಿರುವ ಪ್ಯಾಕೇಜು ಅಥವಾ ಪ್ಯಾಕೇಜಿನ ಮೇಲಿನ ಲೇಬಲ್, ಯಾವುದೇ ನಿರ್ದಿಷ್ಟ ವಸ್ತುವಿನಲ್ಲಿ ತಪ್ಪಾಗಿರುವ ಅಥವಾ ದಾರಿತಪ್ಪಿಸುವ ಅಥವಾ ತನ್ನ ಒಳಾಂಶಗಳ ಸಂಬಂಧದಲ್ಲಿ ಅನ್ಯಥಾ ವಂಚನೆಯಿಂದ ಪ್ಯಾಕ್ ಆಗಿರುವ, ಅದರಲ್ಲಿ ಇರುವ ಹತ್ತಿ ಬೀಜಗಳ ಗುಣದ ಕುರಿತು ಯಾವುದೇ ಹೇಳಿಕೆ, ವಿನ್ಯಾಸ ಅಥವಾ ಲಾಂಛನವನ್ನು (device) ಹೊಂದಿದ್ದರೆ; ಅಥವಾ

(vii) ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಅಗತ್ಯಪಡಿಸಿದ ರೀತಿಯಲ್ಲಿ ಇದನ್ನು ನೋಂದಾಯಿಸಲಾಗಿರದಿದ್ದರೆ; ಅಥವಾ

(viii) ಮನುಷ್ಯರಿಗೆ ಅಥವಾ ಪ್ರಾಣಿಗಳಿಗೆ ಅಪಾಯವನ್ನು ತಡೆಗಟ್ಟುವುದಕ್ಕೆ ಅನುಸರಿಸಬೇಕಾದ, ಅವಶ್ಯವಾಗಬಹುದಾದ ಮತ್ತು ಸಾಕಷ್ಟು ಎಚ್ಚರಿಕೆ ಅಥವಾ ಜಾಗರೂಕತೆಯನ್ನು ಇದರ ಲೇಬಲ್ ಒಳಗೊಂಡಿರದಿದ್ದರೆ; ಅಥವಾ

(ix) ಇದನ್ನು ಒಳಗೊಂಡಿರುವ ಪ್ಯಾಕೇಜು ಅಥವಾ ಪ್ಯಾಕೇಜಿನ ಮೇಲಿನ ಲೇಬಲ್, ಆ ಬಗೆಯ ಅಥವಾ ವೈವಿದ್ಯದ ಡೀಲರ್‌ನೆಂದು ಕಾಲ್ಪನಿಕ ವ್ಯಕ್ತಿ ಅಥವಾ ಕಂಪನಿಯ ಹೆಸರನ್ನು ಹೊಂದಿದ್ದರೆ; ಅಥವಾ

(x) ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳ ಅಗತ್ಯತೆಯೊಂದಿಗಿನ ಅನುಸಾರವಾಗಿ ಇದು ಲೇಬಲ್ ಆಗಿರದಿದ್ದರೆ,-

– ಅಂಥ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜ.

(9) "ಅಧಿಸೂಚನೆ" ಎಂದರೆ, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ ಮತ್ತು ಅದಕ್ಕನುಸಾರವಾಗಿ "ಅಧಿಸೂಚಿತ" ಪದವನ್ನು ಅರ್ಥೈಸತಕ್ಕದ್ದು.

(10) "ಬೆಲೆ ನಿಗದಿಪಡಿಸುವ ಸಮಿತಿ" ಎಂದರೆ, 13ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಬೆಲೆ ನಿಗದಿಪಡಿಸುವ ಸಮಿತಿ;

(11) "ಉತ್ಪಾದಕ" ಎಂದರೆ, ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳನ್ನು ಬೆಳೆಯುವ ಅಥವಾ ಅದರ ಉತ್ಪಾದನೆಯನ್ನು ಸಂಘಟಿಸುವ ವ್ಯಕ್ತಿ, ವ್ಯಕ್ತಿಗಳ ಸಮೂಹ, ಫರ್ಮು ಅಥವಾ ಕಂಪನಿ ಅಥವಾ ಸಂಘಟನೆ;

(12) "ಬೀಜ ವಿಶ್ಲೇಷಕ" ಎಂದರೆ, ಬೀಜ ಅಧಿನಿಯಮ, 1966ರ (1966ರ ಕೇಂದ್ರ ಅಧಿನಿಯಮ 54) 16ನೇ ಪ್ರಕರಣದ ಅಡಿಯಲ್ಲಿ ನೇಮಕನಾದ ಬೀಜ ವಿಶ್ಲೇಷಕ;

(13) "ಬೀಜ ನಿರೀಕ್ಷಕ" ಎಂದರೆ, ಬೀಜ ಅಧಿನಿಯಮ 1966ರ (1966ರ ಕೇಂದ್ರ ಅಧಿನಿಯಮ 54) 13ನೇ ಪ್ರಕರಣದ ಅಡಿಯಲ್ಲಿ ನೇಮಕನಾದ ಬೀಜ ನಿರೀಕ್ಷಕ;

(14) "ರಾಜ್ಯ ಬೀಜ ಪರೀಕ್ಷೆ ಪ್ರಯೋಗಾಲಯ" ಎಂದರೆ, ಬೀಜ ಅಧಿನಿಯಮ, 1966ರ (1966ರ ಕೇಂದ್ರ ಅಧಿನಿಯಮ 54) 4ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು ಅಧಿಸೂಚಿಸಿದಂತೆ ಸ್ಥಾಪನೆಯಾದ ಅಥವಾ ಹಾಗೆಂದು ಘೋಷಣೆಯಾದ ಪ್ರಯೋಗಾಲಯ;

(15) "ಕಳಪೆ ಗುಣಮಟ್ಟ" ಎಂದರೆ, ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಬೀಜದ ಸಂಬಂಧದಲ್ಲಿ ನಿಯಮಿಸಲಾದ ಬೀಜ ಗುಣಮಟ್ಟಗಳನ್ನು ಅದು ಹೊಂದಿರದಿರುವುದು;

(16) "ಹುಸಿ (spurious) ಬೀಜ" ಎಂದರೆ, ತನ್ನ ಮಾದರಿಗೆ ನೈಜವಲ್ಲದ್ದು ಅಥವಾ ಸರಿಯಲ್ಲದ್ದು;

(17) "ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳು' ಎಂದರೆ, ತಳಿವಿಜ್ಞಾನ ಇಂಜಿನಿಯರಿಂಗ್ ಸಾಧನಗಳ ಮೂಲಕ ವಂಶವಾಹಿ ಜೋಡಣೆಯನ್ನು ಮಾರ್ಪಾಟು ಮಾಡಿ ಅಥವಾ ಬದಲಾಯಿಸಿ ಸಂಶ್ಲೇಷಿಸಿದ (synthesized) ಅಥವಾ ಅಭಿವೃದ್ಧಿಗೊಳಿಸಿದ ಬೀಜ;

(18) "ವೈವಿಧ್ಯತೆ" ಎಂದರೆ, ಗೊತ್ತಿರುವ ಅತಿ ಕಡಿಮೆ ದರ್ಜೆಯ ಏಕ ಸಸ್ಯವಿಜ್ಞಾನ ವರ್ಗೀಕರಣದೊಳಗೆ ಸೂಕ್ಷ್ಮಾಣು ಜೀವಿಯನ್ನು ಹೊರತುಪಡಿಸಿದ ಸಸ್ಯ ಸಮೂಹ, ಅದು:–

(i) ಆ ಸಸ್ಯ ಸಮೂಹದ ನೀಡಲಾದ ಜೀನೋಟೈಪ್ ಫಲಿತಾಂಶದಿಂದ ಆದ ಗುಣಲಕ್ಷಣಗಳನ್ನು ಪದಾವಳಿಯ ಮೂಲಕ ಪರಿಭಾಷಿಸಿದ್ದಾಗಿರಬಹುದು;

(ii) ಸದರಿ ಗುಣಲಕ್ಷಣಗಳ ಪೈಕಿ ಕನಿಷ್ಠ ಒಂದು ಪದಾವಳಿಯ ಮೂಲಕ ಯಾವುದೇ ಇತರ ಸಸ್ಯ ಸಮೂಹದಿಂದ ವಿಭಿನ್ನವಾಗಿರಬಹುದು;

(19) "ಮಾರಾಟಗಾರ" ಎಂದರೆ, ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿಬೀಜಗಳ ಮಾರಾಟಗಾರ ಅಥವಾ ಡೀಲರ್.

**3. ಪ್ಯಾಕೇಜುಗಳಿಗೆ ಲೇಬಲ್ ಅಂಟಿಸುವ ಅಗತ್ಯತೆಗಳು.–** (1) ಪ್ರತಿಯೊಬ್ಬ ವ್ಯಕ್ತಿಯು ಈ ಅಧಿನಿಯಮದ ಅಗತ್ಯತೆಗಳಿಗೆ ಅನುಸಾರವಾಗಿ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳನ್ನು ಮಾರಾಟ ಮಾಡತಕ್ಕದ್ದು.

(2) ವಾಣಿಜ್ಯ ಬಿಡುಗಡೆಗಾಗಿ, ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳನ್ನು ಒಳಗೊಂಡಿರುವ ಪ್ರತಿಯೊಂದು ಪ್ಯಾಕಿನ ಮೇಲಿನ ಲೇಬಲ್, ಪರಿಸರ (ಸಂರಕ್ಷಣೆ) ಅಧಿನಿಯಮ, 1986ರ ಅಡಿಯಲ್ಲಿ ರಚಿಸಲಾದ "ಜಿಇಎಸಿ" ಯು ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ಭೌತಿಕ ಶುದ್ಧತೆ, ಅಂಕುರಣ (germination), ಬಿಟಿ ಪ್ರೋಟೀನಿನ ತಳಿವಿಜ್ಞಾನದ ಶುದ್ಧತೆಯ ಮಾನದಂಡಗಳು, ಬೀಜದ ಸ್ವಾಸ್ಥ್ಯ, ನಿರೀಕ್ಷಿತ ಫಲಿತಾಂಶ, ನೀಡಲಾದ ಪರಿಸ್ಥಿತಿಗಳಲ್ಲಿ ಬೀಜದ ಇಳುವರಿಗೆ ಅನ್ವಯವಾಗಬಹುದಾದ ನಿಬಂಧನೆಗಳು ಮತ್ತು ಷರತ್ತುಗಳ ಕನಿಷ್ಠ ಪರಿಮಿತಿಗಳನ್ನು ಪ್ರದರ್ಶಿಸತಕ್ಕದ್ದು.

**4. ಬೀಜ ನಿರೀಕ್ಷಕ.–** (1) ಬೀಜ ಅಧಿನಿಯಮ, 1966ರ (1966ರ ಕೇಂದ್ರ ಅಧಿನಿಯಮ 54) 13ನೇ ಪ್ರಕರಣದ ಅಡಿಯಲ್ಲಿ ನಿಯಮಿಸಲಾದ ಬೀಜ ನಿರೀಕ್ಷಕನನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ನೇಮಕ ಮಾಡಿದ ಬೀಜ ನಿರೀಕ್ಷಕನೆಂದು ಭಾವಿಸತಕ್ಕದ್ದು ಮತ್ತು ಆತನು ಬೀಜ (ನಿಯಂತ್ರಣ) ಆದೇಶ, 1983ರ 14ನೇ ಪ್ರಕರಣದ ಪ್ರಕಾರ ಮತ್ತು 12ನೇ ಪ್ರಕರಣದಲ್ಲಿನ ಹಾಗೂ ಬೀಜಗಳ ನಿಯಮಗಳು 1968ರ 23ನೇ ನಿಯಮದಲ್ಲಿನ ಅವೇ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು ಹಾಗೂ ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(2) ಪ್ರತಿಯೊಬ್ಬ ಬೀಜ ನಿರೀಕ್ಷಕನನ್ನು ಭಾರತ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ ಸಂಖ್ಯೆ:45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರನೆಂದು ಭಾವಿಸತಕ್ಕದ್ದು ಹಾಗೂ ಈ ಬಗ್ಗೆ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ಪ್ರಾಧಿಕಾರಕ್ಕೆ ಅಧಿಕೃತವಾಗಿ ಅಧೀನನಾಗಿರತಕ್ಕದ್ದು.

(3) ಬೀಜ ನಿರೀಕ್ಷಕನು, ಕೃಷಿ ಆಯುಕ್ತರು ಹೊರಡಿಸಿದ ಆದೇಶದ ಆಧಾರದ ಮೇಲೆ, ಸದರಿ ಬೀಜಗಳ ಉತ್ಪಾದಕ ಅಥವಾ ಸಂದರ್ಭಾನುಸಾರ ವ್ಯಾಪಾರಿಯ ಪ್ರಾಸಿಕ್ಯೂಷನ್‌ಗಾಗಿ ವ್ಯವಹರಣೆಯನ್ನು ಹೂಡಬಹುದು.

**5. ಬೀಜ ವಿಶ್ಲೇಷಕ.–** ಬೀಜ ಅಧಿನಿಯಮ, 1966ರ (1966ರ ಕೇಂದ್ರ ಅಧಿನಿಯಮ 54) 12ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡಿರುವ ಬೀಜ ವಿಶ್ಲೇಷಕನು, ಬೀಜ ಅಧಿನಿಯಮ, 1966ರ 16ನೇ ಪ್ರಕರಣಕ್ಕೆ ಅನುಸಾರವಾಗಿ ಮತ್ತು ಬೀಜ (ನಿಯಂತ್ರಣ) ಆದೇಶ, 1983ರ 14ನೇ ಪ್ರಕರಣ ಹಾಗೂ

ಬೀಜಗಳ ನಿಯಮಗಳು 1968ರ 21ನೇ ನಿಯಮಕ್ಕೆ ಅನುಸಾರವಾಗಿ ಅವೇ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು ಹಾಗೂ ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

**6. ರಾಜ್ಯ ಬೀಜ ಪರೀಕ್ಷಣಾ ಪ್ರಯೋಗಾಲಯ.–** ಬೀಜ ಅಧಿನಿಯಮ, 1966ರ (1966ರ ಕೇಂದ್ರ ಅಧಿನಿಯಮ 54) 4ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು ಅಧಿಸೂಚಿಸಲಾದಂತೆ, ಸ್ಥಾಪಿತವಾಗಿರುವ ಅಥವಾ ಹಾಗೆಂದು ಘೋಷಿತವಾಗಿರುವ ರಾಜ್ಯ ಬೀಜ ಪರೀಕ್ಷಣಾ ಪ್ರಯೋಗಾಲಯವನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ಸ್ಥಾಪಿಸಲಾದ ಪ್ರಯೋಗಾಲಯವೆಂದು ಸಹ ಭಾವಿಸತಕ್ಕದ್ದು.

(1) ನಿಯಮಿಸಲಾದ ವಿಧಾನದಲ್ಲಿ ಪರಾಮರ್ಶನಾ ವಿಶ್ಲೇಷಣೆಯ (referral analysis) ಉದ್ದೇಶಕ್ಕಾಗಿ, ಪರಾಮರ್ಶನಾ ಬೀಜ ಪರೀಕ್ಷಾ ಪ್ರಯೋಗಾಲಯಗಳಾಗಿ ಒಂದು ಅಥವಾ ಹೆಚ್ಚು ಬೀಜ ಪರೀಕ್ಷಣಾ ಪ್ರಯೋಗಾಲಯಗಳನ್ನು ಸರ್ಕಾರವು ಗುರುತಿಸಬಹುದು.

(2) ವಿಶ್ಲೇಷಣೆಗಾಗಿ ಬೀಜ ನಿರೀಕ್ಷಕನು ಯಾವ ಪ್ರಯೋಗಾಲಯಕ್ಕೆ ಮಾದರಿಗಳನ್ನು ಕಳುಹಿಸಿರುವನೋ, ಆ ಪ್ರಯೋಗಾಲಯವು ಮಾದರಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಸಂಬಂಧಪಟ್ಟ ಬೀಜ ನಿರೀಕ್ಷಕನಿಗೆ ವಿಶ್ಲೇಷಣಾ ವರದಿಯನ್ನು ಕಳುಹಿಸತಕ್ಕದ್ದು.

**7. ರೈತರ ದೂರುಗಳನ್ನು ಸಲ್ಲಿಸಲು ಮತ್ತು ಅವುಗಳೊಂದಿಗೆ ವ್ಯವಹರಿಸುವ ಕಾರ್ಯವಿಧಾನ.–** ಯಾವೊಬ್ಬ ಬಾಧಿತ ರೈತನು, ತನಗೆ ಪೂರೈಸಿದ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳ ಅನುವಂಶೀಯ ಅಶುದ್ಧತೆ, ಪ್ರದೇಶಕ್ಕೆ ಹೊಂದಿಕೊಳ್ಳಲಾಗದಿರುವುದು, ಹುಸಿ ಅಥವಾ ಕಳಪೆ ಗುಣಮಟ್ಟದ ಕಾರಣದಿಂದ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೆಳೆಯ ವಿಫಲತೆಗೆ ಸಂಬಂಧಿಸಿದಂತೆ ಬೀಜ ಉತ್ಪಾದಕರ ಕ್ಲೇಮುಗಳಗೆ ವಿರುದ್ಧವಾಗಿ ಕುಂಠಿತ ಅಂಕುರಣ, ಕೀಟಾಣುಗಳಿಗೆ ಮತ್ತ ರೋಗಗಳಿಗೆ ತುತ್ತಾಗಿರುವುದರ ಬಗ್ಗೆ, ನೇಮಿಸಲಾದ ವಿಧಾನದಲ್ಲಿ ಲಿಖಿತದಲ್ಲಿ ಅಥವಾ ಇ–ಮೇಲ್/ ಎಸ್‌ಎಂಎಸ್ /ವಿದ್ಯುನ್ಮಾನ ಮಾಧ್ಯಮದ ಮುಖಾಂತರ ಸಮಿತಿಗೆ ದೂರನ್ನು ನೀಡಬಹುದು. ರೈತನು ದೂರಿನ ಜೊತೆಗೆ ಬೀಜ ಖರೀದಿ, ಗುರುತುಗಳು ಅಥವಾ ಲೇಬಲ್‌ಗಳು ಯಾವುವಾದರೂ ಇದ್ದರೆ ಅವುಗಳ ಜೊತೆಗೆ ಬೀಜದ ಪೊಟ್ಟಣಕ್ಕೆ ಸಂಬಂಧಿಸಿದ ಬಿಲ್ಲಿನ ಪ್ರತಿಯನ್ನು ಲಗತ್ತಿಸತಕ್ಕದ್ದು.

**8. ದೂರಿನ ಸ್ವೀಕೃತಿಯ ನಂತರ ಕ್ರಮ.–** (1) ಅಂಥ ದೂರನ್ನು ಸ್ವೀಕರಿಸಿದ ತರುವಾಯ, ಸಮಿತಿಯು,–

(ಎ) ದೂರುದಾರನಿಂದ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಡಾದ ಹತ್ತಿ ಬೀಜಗಳ ಮಾದರಿ ಲಭ್ಯವಿದ್ದರೆ, ಅದನ್ನು ತೆಗೆದುಕೊಳ್ಳಲು, ಅಥವಾ ಮಾರಾಟಗಾರರಿಂದ ಅದೇ ರಾಶಿಯಿಂದ ಮಾದರಿಗಳು ಲಭ್ಯವಿದ್ದರೆ ಅದನ್ನು ತೆಗೆದುಕೊಳ್ಳಲು ಮತ್ತು ಈ ಅಧಿನಿಯಮದ

ಉಪಬಂಧಗಳಿಗೆ ಅನುಸಾರವಾಗಿ ವಿವರವಾದ ವಿಶ್ಲೇಷಣೆಗಾಗಿ ಬೀಜ ವಿಶ್ಲೇಷಕನಿಗೆ ಅಥವಾ ಬೀಜ ಪ್ರಮಾಣೀಕರಣ ಏಜೆನ್ಸಿಗೆ ಅದನ್ನು ಕಳುಹಿಸಲು;

(ಬಿ) ದೂರುದಾರನ ಹೊಲವನ್ನು ತಪಾಸಿಸಲು ಮತ್ತು ಅವಶ್ಯಕ ದತ್ತಾಂಶವನ್ನು ದಾಖಲಿಸಲು;

– ಬೀಜ ನಿರೀಕ್ಷಕನಿಗೆ ನಿರ್ದೇಶಿಸತಕ್ಕದ್ದು.

(2) ಬೀಜ ನಿರೀಕ್ಷಕನು, ಅಂಥ ತಪಾಸಣೆಗಳ ನಂತರ, ನಿಯಮಿಸಲಾದ ವಿಧಾನದಲ್ಲಿ ಪ್ರಾಥಮಿಕ ತಪಾಸಣಾ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಹದಿನೈದು ದಿನಗಳ ಒಳಗಾಗಿ ವಿವರವಾದ ತನಿಖೆಯನ್ನು ನಡೆಸಲು ಜಿಲ್ಲಾ ಮಟ್ಟದ ಸಮಿತಿಗೆ ಕಳುಹಿಸತಕ್ಕದ್ದು.

**9. ತನಿಖಾ ಸಮಿತಿ ಮತ್ತು ಅದರ ಪಾತ್ರ.–** (1) ಸರ್ಕಾರವು, ಅಧಿಸೂಚನೆಯ ಮೂಲಕ, ಕುಂಠಿತ ಅಂಕುರಣ, ಕೀಟಗಳು ಮತ್ತು ರೋಗಗಳಿಗೆ ತುತ್ತಾಗುವಿಕೆ, ತಳಿಯ ಅಶುದ್ಧತೆ ಅಥವಾ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜವು ಹೊಂದಿಕೊಳ್ಳಲಾಗದಿರುವ ಕಾರಣದಿಂದ ರೈತರು ಭರಿಸಿದ ಬೆಳೆ ನಷ್ಟದ ನಿರ್ಧರಣೆ ಮತ್ತು ಮೌಲ್ಯಮಾಪನಕ್ಕಾಗಿ ಜಿಲ್ಲಾ ಮಟ್ಟದ ತನಿಖಾ ಸಮಿತಿಯೆಂದು ಕರೆಯಲಾಗುವ ಒಂದು ಸಮಿತಿಯನ್ನು ರಚಿಸತಕ್ಕದ್ದು.

(2) ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು:–

| | | |
|---|---|---|
| 1. | ಜಿಲ್ಲೆಯ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ, | ಅಧ್ಯಕ್ಷ |
| 2. | ಸಂಬಂಧಪಟ್ಟ ಜಿಲ್ಲೆಯ ಕೃಷಿ ಜಂಟಿ ನಿರ್ದೇಶಕ | ಸದಸ್ಯ ಕಾರ್ಯದರ್ಶಿ |
| 3. | ಸಂಬಂಧಪಟ್ಟ ತಾಲೂಕಿನ ತಹಸೀಲ್ದಾರ್ | ಸದಸ್ಯ |
| 4. | ಕೃಷಿ ಸಹಾಯಕ ನಿರ್ದೇಶಕ, ಸಂಬಂಧಪಟ್ಟ ಜಿಲ್ಲೆಯ ಅಧಿಕಾರವ್ಯಾಪ್ತಿಯುಳ್ಳ ಬೀಜ ಪರೀಕ್ಷಣಾ ಪ್ರಯೋಗಾಲಯ | ಸದಸ್ಯ |
| 5. | ಅಧಿಕಾರವ್ಯಾಪ್ತಿಯುಳ್ಳ ರಾಜ್ಯ ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯದಿಂದ ಸರ್ಕಾರವು ನಾಮನಿರ್ದೇಶಿಸಿದ ಹತ್ತಿ ಬೆಳೆಯೊಂದಿಗೆ ವ್ಯವಹರಿಸುವ ಒಬ್ಬ ವಿಜ್ಞಾನಿ | ಸದಸ್ಯ |
| 6. | ಸಂಬಂಧಪಟ್ಟ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕ | ಸದಸ್ಯ |
| 7. | ಸಂಬಂಧಪಟ್ಟ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ | ಸದಸ್ಯ |

(3) ಬೀಜ ನಿರೀಕ್ಷಕನ ಪ್ರಾಥಮಿಕ ವರದಿ ಮತ್ತು ಬೀಜ ವಿಶ್ಲೇಷಕನ ವರದಿಯ ಆಧಾರದ ಮೇಲೆ, ಸಮಿತಿಯು ಏಳು ದಿನಗಳ ಒಳಗಾಗಿ ಭೇಟಿ ನೀಡಿ, ನಿಯಮಿಸಲಾದ ವಿಧಾನದಲ್ಲಿ ತಾನು ಪತ್ತೆ ಮಾಡಿದ ವಿಷಯಗಳ ಸವಿವರವಾದ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಸಂಬಂಧಪಟ್ಟ ಜಿಲ್ಲೆಯ

ಜಿಲ್ಲಾಧಿಕಾರಿಗೆ ಆತನ ಷರಾವನ್ನು ದಾಖಲಿಸಲು ಅದನ್ನು ಕಳುಹಿಸತಕ್ಕದ್ದು ಹಾಗೂ ಅದನ್ನು ಕೃಷಿ ಆಯುಕ್ತರಿಗೆ ಕಳುಹಿಸತಕ್ಕದ್ದು.

(4) ರೈತನ ನಷ್ಟವನ್ನು ಅಂದಾಜು ಮಾಡುವಾಗ, ಸಮಿತಿಯು ಈ ಮುಂದಿನ ಅಂಶಗಳನ್ನು ಪರಿಗಣಿಸತಕ್ಕದ್ದು, ಎಂದರೆ:-

(i) ಬೀಜದಲ್ಲಿನ ನ್ಯೂನ್ಯತೆಯ ಕಾರಣದಿಂದ ಕುಂಠಿತ ಅಂಕುರಣದ, ಆದರೆ ಫಲವತ್ತಲ್ಲದ ಮಣ್ಣಿನ ಸ್ಥಿತಿ ಅಥವಾ ತೇವಾಂಶದ ಒತ್ತಡ ಹಾಗೂ ಯುಕ್ತವಲ್ಲದ ವಿಧಾನಗಳ ಪ್ಯಾಕೇಜ್ ಇತ್ಯಾದಿ ಕಾರಣಗಳಿಂದಲ್ಲದ ನಷ್ಟವನ್ನು, ಬೀಜದ ವೆಚ್ಚ ಮತ್ತು ಸಂಬಂಧಪಟ್ಟ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯವು ನಿರ್ಧರಿಸಿದಂತೆ ಪ್ರತಿ ಹೆಕ್ಟೇರಿಗೆ ಬೀಜ ಬಿತ್ತನೆವರೆಗಿನ ಸಾಗುವಳಿ ವೆಚ್ಚವನ್ನು ಪರಿಗಣಿಸಿ ಲೆಕ್ಕಹಾಕತಕ್ಕದ್ದು.

(ii) ಬೀಜ ಉತ್ಪಾದಕನು ಮಾಡಿದ ನಿರ್ದಿಷ್ಟ ಕ್ಲೇಮಿಗೆ ಅನುಸಾರವಾಗಿ ಕೀಟಗಳು ಮತ್ತು ರೋಗಗಳಿಗೆ ನಿರೋಧತೆಯ ಅಗತ್ಯ ಪ್ರಮಾಣ (ಡಿಗ್ರಿ) ವಿಫಲತೆಯ ಸಂದರ್ಭದಲ್ಲಿ, ನಷ್ಟವನ್ನು ಸಸ್ಯ ಸಂರಕ್ಷಣೆ ಕ್ರಮಗಳ ಮೇಲೆ ಭರಿಸಿದ ಹೆಚ್ಚುವರಿ ವೆಚ್ಚ ಮತ್ತು ಕೀಟಗಳು ಅಥವಾ ರೋಗಗಳಿಗೆ ನಿರೋಧಕತೆಯ ವಿಫಲತೆಯ ಕಾರಣದಿಂದ ಅಂದಾಜಿಸಿದ ಬೆಳೆನಷ್ಟಗಳನ್ನು ಪರಿಗಣಿಸಿ ಲೆಕ್ಕ ಹಾಕತಕ್ಕದ್ದು.

(iii) ಅನುವಂಶೀಯ ಅಶುದ್ಧತೆಯ, ವಿಫಲತೆಯ ಮತ್ತು ಹೊಂದಿಕೊಳ್ಳದಿರುವ ಸಂದರ್ಭದಲ್ಲಿ, ನಷ್ಟವನ್ನು ಪ್ರಶ್ನಿತ ಬೆಳೆಯ ಇಳುವರಿಯಲ್ಲಿ ಮತ್ತು ಸ್ಥಳೀಯ ಪ್ರದೇಶದಲ್ಲಿ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೆಳೆಯ ನಿರೀಕ್ಷಿತ ಇಳುವರಿಯಲ್ಲಿನ ವೆಚ್ಚ ವ್ಯತ್ಯಾಸವನ್ನು ಪರಿಗಣಿಸಿ ಲೆಕ್ಕ ಹಾಕತಕ್ಕದ್ದು.

**10. ಪರಿಹಾರ.**- (1) ಸಮಿತಿಯ, ಜಿಲ್ಲಾಧಿಕಾರಿಯ ವರದಿಯನ್ನು ಪರಿಗಣನೆಗೆ ತೆಗೆದುಕೊಂಡ ತರುವಾಯ ಮತ್ತು ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ತರುವಾಯ, ಕೃಷಿ ಆಯುಕ್ತನು ನಿರ್ಧರಿಸಿದ ಬೆಳೆ ನಷ್ಟದ ಶೇಕಡಾವಾರಿಗೆ ಅನುಸಾರವಾಗಿ ಆತನು ನಿರ್ದಿಷ್ಟಪಡಿಸಬಹುದಾದ ಅಂಥ ಪರಿಹಾರವನ್ನು ಬಾಧಿತ ರೈತನಿಗೆ ಸಂದಾಯ ಮಾಡಲು, ಬೀಜ ಉತ್ಪಾದಕನಿಗೆ ಮೂವತ್ತು ದಿನಗಳೊಳಗಾಗಿ ಆದೇಶವನ್ನು ನೀಡತಕ್ಕದ್ದು.

(2) ಬೀಜ ಉತ್ಪಾದಕನು ಪರಿಹಾರದ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯ ಒಳಗಾಗಿ 11ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಕೃಷಿ ಆಯುಕ್ತನು ನೀಡಿದ ಅಂಥ ಪರಿಹಾರವನ್ನು ರೈತನಿಗೆ ಸಂದಾಯ ಮಾಡತಕ್ಕದ್ದು;

(3) ವಿಳಂಬ ಸಂದಾಯದ ಸಂದರ್ಭದಲ್ಲಿ ಪ್ರತೀ ವರ್ಷಕ್ಕೆ ಶೇಕಡಾ 24ರಷ್ಟು ಬಡ್ಡಿಯನ್ನು ವಿಧಿಸತಕ್ಕದ್ದು;

(4) ಬೀಜ ಉತ್ಪಾದಕನು ಪರಿಹಾರವನ್ನು ಸಂದಾಯ ಮಾಡಲು ವಿಫಲನಾದಾಗ, ಅದನ್ನು ಕರ್ನಾಟಕ ಭೂಕಂದಾಯ ಅಧಿನಿಯಮ, 1964 ಮತ್ತು ಅದರಡಿ ರಚಿಸಲಾದ ನಿಯಮಗಳಿಗೆ ಅನುಸಾರವಾಗಿ ಭೂಕಂದಾಯದ ಬಾಕಿಗಳನ್ನು ವಸೂಲು ಮಾಡುವ ಅದೇ ವಿಧಾನದಲ್ಲಿ ಭೂಕಂದಾಯ ಬಾಕಿ ಎಂದು ವಸೂಲು ಮಾಡತಕ್ಕದ್ದು ಮತ್ತು ಪರಿಹಾರವನ್ನು ರೈತನ ಖಾತೆಗೆ ಜಮಾ ಮಾಡತಕ್ಕದ್ದು.

**11. ಅಪೀಲು.–** (1) ಕೃಷಿ ಆಯುಕ್ತನ ನಿರ್ಣಯದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು ಆತನಿಗೆ ಪರಿಹಾರದ ತೀರ್ಪಿನ ನಿರ್ಣಯವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಅಂಥ ಶುಲ್ಕದ ಜೊತೆಗೆ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ಅಪೀಲು ಸಲ್ಲಿಸಬಹುದು ಮತ್ತು ಅಪೀಲು ಪ್ರಾಧಿಕಾರದ ನಿರ್ಣಯವು ಅಂತಿಮವಾಗಿರತಕ್ಕದ್ದು.

ಪರಂತು, ಅಪೀಲು ಪ್ರಾಧಿಕಾರವು, ಮೂವತ್ತು ದಿನಗಳ ಸದರಿ ಅವಧಿಯ ಮುಕ್ತಾಯದ ತರುವಾಯ, ಅಪೀಲುದಾರನು ಸಕಾಲದಲ್ಲಿ ಅಪೀಲನ್ನು ದಾಖಲಿಸುವುದರಿಂದ ಸಾಕಷ್ಟು ಕಾರಣಗಳಿಗಾಗಿ ನಿರ್ಬಂಧಿಸಲ್ಪಟ್ಟಿದ್ದನು ಎಂದು ಮನವರಿಕೆ ಮಾಡಿಕೊಂಡ ತರುವಾಯ ಅಪೀಲನ್ನು ಪುರಸ್ಕರಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಅಪೀಲನ್ನು ಸ್ವೀಕರಿಸಿದ ನಂತರ, ಅಪೀಲು ಪ್ರಾಧಿಕಾರವು ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳುವ ಒಂದು ಅವಕಾಶವನ್ನು ನೀಡಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಆದರೆ ಅಪೀಲನ್ನು ದಾಖಲಿಸಿದ ದಿನಾಂಕದಿಂದ ಅರವತ್ತು ದಿನಗಳಿಗೆ ಹೆಚ್ಚಾಗದಂತಹ ಅವಧಿಯ ಒಳಗಾಗಿ ಅಪೀಲನ್ನು ವಿಲೇ ಮಾಡತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿಯ ಅಪೀಲು ಪ್ರಾಧಿಕಾರದ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕದ್ದು.

**12. ದಂಡಗಳು.–**ಯಾವೊಬ್ಬ ವ್ಯಕ್ತಿ/ಏಜೆನ್ಸಿ/ಇತರ ನಿಗಮಿತ ನಿಕಾಯದ ನಿರ್ದೇಶಕ/ವ್ಯವಸ್ಥಾಪಕ/ಕಾರ್ಯದರ್ಶಿ ಅಥವಾ ಅದರ ಯಾವೊಬ್ಬ ಇತರ ಅಧಿಕಾರಿ/ಏಜೆಂಟನು, ಆತನ ಅರಿವಿಗೆ ಬಾರದಂತೆ ಉಲ್ಲಂಘನೆ ಆಗಿದೆಯೆಂದು ಅಥವಾ ಅಂಥ ಉಲ್ಲಂಘನೆಯನ್ನು ತಡೆಯಲು ಆತನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ರುಜುವಾತುಪಡಿಸಿದ ಹೊರತು, ಆತನನ್ನು ಅಂಥ ಉಲ್ಲಂಘನೆಯ ಅಪರಾಧಿಯೆಂದು ಭಾವಿಸತಕ್ಕದ್ದು ಮತ್ತು ಅಪರಾಧ ನಿರ್ಣಯವಾದ ತರುವಾಯ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾಗಿರುವ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**13. ಬೆಲೆ ನಿಗದಿಪಡಿಸುವ ಸಮಿತಿಯ ರಚನೆ.–** (1) ಸರ್ಕಾರವು ಅಧಿಸೂಚನೆಯ ಮೂಲಕ, ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜದ ಬೆಲೆ ನಿಗದಿಗಾಗಿ ಬೆಲೆ ನಿಗದಿಪಡಿಸುವ ಸಮಿತಿ ಎಂದು ಕರೆಯಲಾಗುವ ಸಮಿತಿಯನ್ನು ನೇಮಿಸತಕ್ಕದ್ದು.

(2) ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| 1 | ಕೃಷಿ ನಿರ್ದೇಶಕರು | ಅಧ್ಯಕ್ಷರು |
| 2 | ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಅತಿ ಹಿರಿಯ ಹತ್ತಿ ಬೆಳೆ ತಜ್ಞ (Cotton Agronomist) | ಸದಸ್ಯರು |
| 3 | ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಅತಿ ಹಿರಿಯ ಕೃಷಿ ಶಾಸ್ತ್ರಜ್ಞ | ಸದಸ್ಯರು |
| 4 | ಖಾಸಗಿ ಹತ್ತಿ ಬೀಜ ಉತ್ಪಾದಕರ ಸಂಘದ ಅಧ್ಯಕ್ಷ | ಸದಸ್ಯರು |
| 5 | ಹೆಚ್ಚುವರಿ ಕೃಷಿ ನಿರ್ದೇಶಕ (ಸಾವಯವ ಕೃಷಿ) | ಸದಸ್ಯ ಕಾರ್ಯದರ್ಶಿ |

(2) ಬೆಲೆ ನಿಗದಿಪಡಿಸುವ ಸಮಿತಿಯು, ಅಗತ್ಯವಿದ್ದಲ್ಲಿ ಸಂಬಂಧಿಸಿದ ವಿವಿಧ ಏಜೆನ್ಸಿಗಳಿಂದ ಅವಶ್ಯವಿರುವಾಗಲೆಲ್ಲಾ ಪಡೆದ ವಿಶಿಷ್ಟ ಗುಣ ಮೌಲ್ಯವನ್ನು ಒಳಗೊಂಡಂತೆ ಉತ್ಪಾದನಾ ವೆಚ್ಚ ಇತ್ಯಾದಿಗಳನ್ನು ಪರಿಗಣನೆಗೆ ತೆಗೆದುಕೊಂಡ ತರುವಾಯ ದರವನ್ನು ನಿಗದಿಪಡಿಸಲು ಸರ್ಕಾರಕ್ಕೆ ಸಲಹೆಯನ್ನು ನೀಡಬಹುದು. ಸರ್ಕಾರವು, ಬೆಲೆ ನಿಗದಿಪಡಿಸುವ ಸಮಿತಿಯ ಶಿಫಾರಸ್ಸಿನ ಮೇರೆಗೆ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಕ್ಕಾಗಿ ಹಂಗಾಮು ಪ್ರಾರಂಭವಾಗುವುದಕ್ಕೆ ಮೊದಲು ಅಧಿಸೂಚನೆಯ ಮೂಲಕ ಗರಿಷ್ಠ ಮಾರಾಟ ದರವನ್ನು ನಿಗದಿಪಡಿಸಬಹುದು.

(3) ಬೆಲೆ ನಿಗದಿಪಡಿಸುವ ಸಮಿತಿಯು ವರ್ಷದಲ್ಲಿ ಒಂದು ಬಾರಿ ಸಭೆ ಸೇರತಕ್ಕದ್ದು ಮತ್ತು ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು:

ಪರಂತು, ಬೆಲೆ ನಿಗದಿಪಡಿಸುವ ಸಮಿತಿಯು ಅಗತ್ಯವಿದ್ದಲ್ಲಿ, ಅವಶ್ಯವಿರುವಾಗಲೆಲ್ಲಾ ಸಭೆ ಸೇರಬಹುದು.

(4) ಯಾವೊಬ್ಬ ವ್ಯಕ್ತಿಯು, (2)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು ನಿಗದಿಪಡಿಸಿದ ಗರಿಷ್ಠ ಮಾರಾಟ ದರಕ್ಕಿಂತ ಹೆಚ್ಚಿನ ಬೆಲೆಗೆ ಬೀಜಗಳನ್ನು ಮಾರಾಟ ಮಾಡತಕ್ಕದ್ದಲ್ಲ.

(5) ಯಾವೊಬ್ಬ ವ್ಯಕ್ತಿಯು (4)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಆತನು,-

(i) ಮೊದಲ ಅಪರಾಧಕ್ಕಾಗಿ ಐವತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಯಿಂದ; ಮತ್ತು

(ii) ಎರಡನೇ ಅಪರಾಧದ ಸಂದರ್ಭದಲ್ಲಿ, ಅಂಥ ವ್ಯಕ್ತಿಯು, ಈ ಪ್ರಕರಣದ ಅಡಿಯಲ್ಲಿನ ಈ ಹಿಂದೆ ಅಪರಾಧ ನಿರ್ಣೀತನಾಗಿದ್ದರೆ, ಆತನು ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ,

-ದಂಡಿತನಾಗತಕ್ಕದ್ದು.

**14. ನಿರ್ದೇಶನಗಳನ್ನು ನೀಡುವ ಅಧಿಕಾರ.–** ಸರ್ಕಾರವು, ಕೃಷಿ ಇಲಾಖೆಯ ಯಾವೊಬ್ಬ ಅಧಿಕಾರಿಗೆ ಈ ಅಧಿನಿಯಮದ ಉದ್ದೇಶಗಳನ್ನು ನಿರ್ವಹಿಸಲು ಅದಕ್ಕೆ ಅವಶ್ಯಕವೆಂದು ಕಂಡುಬರಬಹುದಾದ ಅಂಥ ನಿರ್ದೇಶನಗಳನ್ನು ನೀಡಬಹುದು. ಅದನ್ನು ನಿರ್ವಹಿಸುವುದು ಅಂಥ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

**15. ವಿನಾಯಿತಿ.–** ಈ ಅಧಿನಿಯಮದಲ್ಲಿ ಇರುವುದಾವುದೂ ಬಿತ್ತನೆಯ ಉದ್ದೇಶಕ್ಕಾಗಿ ಒಬ್ಬ ರೈತನು ಸ್ವಂತ ಆವರಣದಲ್ಲಿ ಬೆಳೆದ ಮತ್ತು ಆತನಿಂದ ಇನ್ನೊಬ್ಬ ರೈತನಿಗೆ ಬಳಕೆ ಮಾಡಿಕೊಳ್ಳಲು ನೇರವಾಗಿ ಮಾರಾಟ ಮಾಡಿದ ಅಥವಾ ರವಾನಿಸಿದ ಯಾವುದೇ ಹತ್ತಿ ಬೀಜಕ್ಕೆ ಅನ್ವಯವಾಗತಕ್ಕದ್ದಲ್ಲ.

**16. ಕಂಪನಿಗಳಿಂದ ಅಪರಾಧಗಳು.–** (1) ಈ ಪ್ರಕರಣದ ಅಡಿಯಲ್ಲಿ ಒಂದು ಅಪರಾಧವನ್ನು ಒಂದು ಕಂಪನಿಯು ಎಸಗಿದ್ದರೆ, ಅಪರಾಧ ನಡೆದ ಸಮಯದಲ್ಲಿ ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕೆ ಪ್ರಭಾರಿಯಾಗಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು, ಅಷ್ಟೇ ಅಲ್ಲದೇ ಕಂಪನಿಯನ್ನು ಸಹ ಆ ಅಪರಾಧದ ಅಪರಾಧಿಯೆಂದು ಭಾವಿಸತಕ್ಕದ್ದು ಮತ್ತು ಅವರ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡನೆಗೆ ಒಳಗಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಇರುವುದಾವುದೂ ಯಾವೊಬ್ಬ ಅಂಥ ವ್ಯಕ್ತಿಯನ್ನು, ಆತನು ತನ್ನ ಅರಿವಿಗೆ ಬಾರದಂತೆ ಅಪರಾಧವನ್ನು ಮಾಡಲಾಗಿದೆಯೆಂದು ಮತ್ತು ಆತನು ಅಂಥ ಅಪರಾಧವನ್ನು ಮಾಡುವುದನ್ನು ತಡೆಯಲು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ಸಾಬೀತುಪಡಿಸಿದರೆ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ದಂಡನೆಗೆ ಗುರಿಯಾಗತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿ ಕಂಪನಿಯು ಅಪರಾಧ ಮಾಡಿದ್ದಲ್ಲಿ ಮತ್ತು ಅಪರಾಧವನ್ನು, ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವರ ಕಡೆಯಿಂದಾದ ಆರೋಪಿಸಬಹುದಾದ ಯಾವುದೇ ನಿರ್ಲಕ್ಷ್ಯದಿಂದ ಮಾಡಲಾಗಿದೆಯೆಂದು ರುಜುವಾತಾದರೆ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಹಾಗೂ ತದನುಸಾರವಾಗಿ ಆತನ ವಿರುದ್ಧದ ಕ್ರಮಕ್ಕೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ, "ನಿರ್ದೇಶಕ" ಎಂದರೆ ಫರ್ಮಿನಲ್ಲಿನ ಒಬ್ಬ ಪಾಲುದಾರ.

**17. ಅಪರಾಧಗಳ ಸಂಜ್ಞೇಯತೆ.–**ಕೃಷಿ ನಿರ್ದೇಶಕ ಅಥವಾ ಆತನಿಂದ ಪ್ರಾಧಿಕೃತನಾದ ಯಾವೊಬ್ಬ ಇತರ ಪ್ರಾಧಿಕಾರಿಯು ಮಾಡಲಾದ ಅಂಥ ಅಪರಾಧವನ್ನು ಉಂಟುಮಾಡುವ ಸಂಗತಿಗಳನ್ನು ಲಿಖಿತದಲ್ಲಿನ ವರದಿಯನ್ನು ಹೊರತುಪಡಿಸಿ, ಈ ಅಧಿನಿಯಮದ ಅಡಿಯಲ್ಲಿ ದಂಡಿಸಬಹುದಾದ ಅಪರಾಧದ ಸಂಜ್ಞೇಯತೆಯನ್ನು ನ್ಯಾಯಾಲಯವು ಕೈಗೊಳ್ಳತಕ್ಕದ್ದಲ್ಲ.

**18. ನಿಯಮಗಳ ರಚನಾಧಿಕಾರ.–** (1) ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಪೂರ್ವಪ್ರಕಟಣೆಯ ತರುವಾಯ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿದ್ದರೆ ಮಂಡಿಸತಕ್ಕದ್ದು, ಅದು ಅಧಿವೇಶನದಲ್ಲಿ ಇಲ್ಲದಿದ್ದರೆ, ನಿಕಟ ತರುವಾಯದ ಅಧಿವೇಶನದಲ್ಲಿ ಒಂದು ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಹದಿನಾಲ್ಕು ದಿನಗಳವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ಅಥವಾ ಅಧಿಸೂಚನೆಯನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಅಥವಾ ಅಧಿಸೂಚನೆಯು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯಕ್ಕೂ ಬಾಧಕವಾಗತಕ್ಕದ್ದಲ್ಲ.

**19. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** (1) ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಯಾವುದೇ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಯಾವುದೇ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

(2) ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಯಾವುದೇ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಹಾನಿಯ ಸಂಬಂಧದಲ್ಲಿ, ರಾಜ್ಯ ಸರ್ಕಾರ ಅಥವಾ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಯಾವುದೇ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ

**20. ತೊಂದರೆಗಳ ನಿವಾರಣೆ.-** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ತೊಂದರೆಯ ನಿವಾರಣೆಗಾಗಿ ಅವಶ್ಯಕ ಹಾಗೂ ಯುಕ್ತವೆಂದು ತನಗೆ ಕಂಡುಬರುವಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಅಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಯಾವುದೇ ಅಂಥ ಆದೇಶವನ್ನು ಹೊರಡಿಸತಕ್ಕದ್ದಲ್ಲ.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪ್ರಸ್ತುತ ರಾಜ್ಯದಲ್ಲಿ ಈಗಿರುವ ಬೀಜ ಕಾನೂನುಗಳಲ್ಲಿ ಕುಲಾಂತರಿ ಮತ್ತು ತಳಿ ವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳಿಗೆ ಬೆಲೆಯನ್ನು ನಿಗದಿಪಡಿಸುವುದಕ್ಕೆ ಹಾಗೂ ಅಂಥ ಹತ್ತಿ ಬೀಜಗಳ ಬೆಳೆ ವೈಫಲ್ಯವಾದ ಸಂದರ್ಭದಲ್ಲಿ ನಷ್ಟಪರಿಹಾರವನ್ನು ಸಂದಾಯ ಮಾಡುವುದಕ್ಕೆ ಉಪಬಂಧಗಳು ಇರುವುದಿಲ್ಲ. ಇದರಿಂದಾಗಿ, ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜದ ಮಾರಾಟಗಾರರು ಮತ್ತು ಉತ್ಪಾದಕರು ರೈತರಿಂದ ಅತಿಯಾದ ಬೆಲೆಗಳನ್ನು ಸಂಗ್ರಹಿಸುವ ಮೂಲಕ ಬಡ ರೈತರನ್ನು ಶೋಷಿಸುತ್ತಿರುವರು. ಮುಂದುವರಿದು, ದೋಷಪೂರ್ಣ/ಕಳಪೆ ಗುಣಮಟ್ಟದ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳಿಂದಾಗಿ ಬೆಳೆ ವೈಫಲ್ಯವಾದ ಸಂದರ್ಭದಲ್ಲಿ ರೈತರಿಗೆ ನಷ್ಟಪರಿಹಾರವನ್ನು ಪಾವತಿಸುವುದಕ್ಕೆ ಪ್ರಸ್ತುತ ಬೀಜ ಕಾನೂನುಗಳಲ್ಲಿ ಉಪಬಂಧಗಳನ್ನು ಕಲ್ಪಿಸದಿರುವುದರಿಂದ, ರೈತರು ತೊಂದರೆಗಳನ್ನು ಎದುರಿಸುತ್ತಿದ್ದಾರೆ ಹಾಗೂ ಆರ್ಥಿಕ ನಷ್ಟವನ್ನು ಅನುಭವಿಸುತ್ತಿದ್ದಾರೆ.

ಆದುದರಿಂದ, ರಾಜ್ಯದಲ್ಲಿ ರೈತರ ಹಿತಾಸಕ್ತಿಗಾಗಿ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೀಜಗಳ ಮಾರಾಟ ಬೆಲೆಯನ್ನು ನಿಗದಿಪಡಿಸುವುದಕ್ಕೆ ಹಾಗೂ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೆಳೆ ವೈಫಲ್ಯದ ಸಂದರ್ಭದಲ್ಲಿ ರೈತರಿಗೆ ಅವರ ಶ್ರಮವನ್ನು ಕಡಿಮೆ ಮಾಡಲು ಸೂಕ್ತವಾಗಿ ನಷ್ಟಪರಿಹಾರ ನೀಡುವುದಕ್ಕೆ ಸಂಬಂಧಿಸಿದ ಬೀಜ ಉತ್ಪಾದಕರನ್ನು ಹೊಣೆಗಾರನನ್ನಾಗಿಸಿ ರೈತರಿಗೆ ನಷ್ಟಪರಿಹಾರ ನೀಡುವುದಕ್ಕೆ ಕುಲಾಂತರಿ ಮತ್ತು ತಳಿ ವಿಜ್ಞಾನದ ಪ್ರಕಾರ ಹತ್ತಿ ಬೀಜದ ಗುಣಮಟ್ಟವನ್ನು ಸಾಬೀತುಪಡಿಸಲು ಹೆಚ್ಚಿನ ಮತ್ತು ಪರಿಣಾಮಕಾರಿ ಕಾರ್ಯತಂತ್ರವನ್ನು ವಿಕಾಸಗೊಳಿಸಲು ರಾಜ್ಯದಲ್ಲಿ ಉಪಬಂಧಗಳನ್ನು ಕಲ್ಪಿಸುವುದೂ ಸಹ ಅತ್ಯಾವಶ್ಯಕವಾಗಿದೆ.

2013ರ ಖಾರಿಫ್ ಋತುವಿನಲ್ಲಿ, ಹಾವೇರಿ, ಧಾರವಾಡ, ಗದಗ, ಬೆಳಗಾವಿ, ಚಿತ್ರದುರ್ಗ, ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿನ 60,450 ಹೆಕ್ಟೇರ್ ಪ್ರದೇಶದಲ್ಲಿ ಕುಲಾಂತರಿ ಮತ್ತು ತಳಿವಿಜ್ಞಾನದ ಪ್ರಕಾರ ಮಾರ್ಪಾಟಾದ ಹತ್ತಿ ಬೆಳೆಯ ವೈಫಲ್ಯದ ನಿದರ್ಶನಗಳಿದ್ದಾಗ, ಬೆಳೆ ವೈಫಲ್ಯದ ಸಂದರ್ಭದಲ್ಲಿ ಬಾಧಿತ ರೈತರಿಗೆ ನಷ್ಟ ಪರಿಹಾರವನ್ನು ನೀಡಲು ಅಸ್ತಿತ್ವದಲ್ಲಿರುವ ಕಾನೂನುಗಳಲ್ಲಿ ಸಾಕಷ್ಟು ಉಪಬಂಧಗಳನ್ನು ಕಲ್ಪಿಸದಿರುವುದರಿಂದಾಗಿ, ಬಾಧಿತ ರೈತರಿಗೆ ನಷ್ಟಪರಿಹಾರವನ್ನು ನೀಡುವುದು ಅತ್ಯಂತ ಕಷ್ಟಕರವಾಗಿದೆ. ವಿಶೇಷ ಪ್ರಕರಣವಾಗಿ, ರಾಜ್ಯ ಸರ್ಕಾರವು 36.35 ಕೋಟಿ ರೂಪಾಯಿಗಳವರೆಗೆ ರೈತರಿಗೆ ನಷ್ಟಪರಿಹಾರವನ್ನು ನೀಡಿತು.

ಈಗ, ರಾಜ್ಯದಲ್ಲಿ ಅನುಷ್ಠಾನಗೊಳಿಸಿರುವ ಬೀಜ ಕಾನೂನುಗಳು ಕೇಂದ್ರ ಸರ್ಕಾರವು ಅಧಿನಿಯಮಿಸಿದಂಥವುಗಳಾಗಿವೆ. ಆದ್ದರಿಂದ ಪ್ರಸ್ತುತ ಕೇಂದ್ರ ಬೀಜ ಶಾಸನಕ್ಕೆ ಸಂಬಂಧಿಸಿದಂತೆ ತಿದ್ದುಪಡಿಗಳು ಮತ್ತು ಇತರ ಲೋಪಗಳನ್ನು ಸರಿಪಡಿಸಲು ಎರಡು ದಶಕಗಳಿಂದ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾಪಿಸಿದೆಯಾದರೂ, ಅದು ಇದುವರೆಗೆ ಅಂಗೀಕಾರವಾಗಿರುವುದಿಲ್ಲ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನೆಗೆ ಸಂಬಂಧಿಸಿದ ಜ್ಞಾಪನ ಪತ್ರ

| | |
|---|---|
| ಖಂಡ 2 : | (i) 8ನೇ ಉಪ ಖಂಡದ (v) ಬಾಬುವು, ಹತ್ತಿ ಬೀಜದ ಮಾರ್ಪಾಟುಗಳ ಮಿತಿಗಳನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(ii) 8ನೇ ಉಪ ಖಂಡದ (x) ಬಾಬುವು, ಲೇಬಲ್ ಮಾಡುವ ವಿಧಾನದ ಕುರಿತು, ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 6 : | (1)ನೇ ಉಪಖಂಡವು, ಪರಾಮರ್ಶನಾ ವಿಶ್ಲೇಷಣೆಯ ಉದ್ದೇಶಕ್ಕಾಗಿ ಪರಾಮರ್ಶನಾ ಬೀಜ ಪರೀಕ್ಷಣಾ ಪ್ರಯೋಗಾಲಯಗಳನ್ನು ಗುರುತಿಸಬಹುದಾದ ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 11 : | (1)ನೇ ಉಪಖಂಡವು, ಅಪೀಲು ಪ್ರಾಧಿಕಾರದ ನಿರ್ಣಯವನ್ನು ತಿಳಿಸುವ ಮತ್ತು ಬಾಧಿತ ವ್ಯಕ್ತಿಯಿಂದ ಶುಲ್ಕವನ್ನು ಸಂದಾಯ ಮಾಡಬೇಕಾದ ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 18 : | (1)ನೇ ಉಪಖಂಡವು, ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಕೃಷ್ಣ ಬೈರೇಗೌಡ**
ಕೃಷಿ ರಾಜ್ಯ ಸಚಿವರು

**ಎಂ. ಗುರುರಾಜ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ , 750–ಪ್ರತಿಗಳು 31ನೇ ಜುಲೈ, 2015

KARNATAKA LEGISLATIVE ASSEMBLY

FOURTEENTH LEGISLATIVE ASSEMBLY

EIGHTH SESSION

# THE KARNATAKA TRANSGENIC AND GENETICALLY MODIFIED COTTON SEEDS (FIXATION OF SALE PRICE AND PAYMENT OF COMPENSATION) BILL, 2015

**(L.A. Bill No. 35 of 2015)**

A Bill for fixation of sale price of transgenic and genetically modified cotton seeds and payment of compensation for crop failure thereto;

Whereas, there is no provision for price fixation of transgenic and genetically modified cotton seeds and to control the sale prices of such cotton seeds in the State.

And whereas, it has become imperative on the part of the State to fix sale price of transgenic and genetically modified cotton seeds in the interest of the farmers in the State.

And whereas, it is expedient to compensate the farmers in case of failure of transgenic and genetically modified cotton crops by fixing the responsibility on the concerned seed producer to compensate farmers suitably.

Be it enacted by the Karnataka State legislature in the sixty-sixth year of the Republic of India, as follows:-

**1. Short title, application and commencement.-** (1) This Act may be called the Karnataka transgenic and genetically modified cotton seeds (fixation of sale price and payment of compensation) Act, 2015.

(2) Save as otherwise provided in this Act, it shall apply to,-

(a) every dealer; and

(b) every producer of transgenic and genetically modified cotton seed except when the transgenic and genetically modified cotton seed is produced by him for his own use and not for sale.

(3) It shall come into force on such date as the State Government may, by notification in the Gazette, appoint.

**2. Definitions.-** In this Act, unless the context otherwise requires,-

(1) "**Agronomic performance**" means distinguishable Agronomic qualitative and quantitative characteristics of any transgenic and genetically modified cotton seed considered for evaluation of performance as claimed by the producer on label;

(2) **“Cotton Seed”** means cotton seed of any variety and includes transgenic and genetically modified cotton seed varieties used for sowing;

(3) **“Committee”** means the District level Investigation Committee constituted under section 9;

(4) "**Commissioner for Agriculture**" means the Administrative Head of the Department of Agriculture appointed by the Government as the Commissioner for Agriculture;

(5) "**Director of Agriculture**" means the technical head of the Department of Agriculture appointed by the Government as Director of Agriculture;

(6) "**Farmer**" means any person who raises transgenic and genetically modified cotton crops either by cultivating the land by himself or through any other person but, shall not include persons, companies, traders, dealers who engage in the commercial procurement and sale of seeds;

(7) "**Government**" means the State Government;

(8) **“Misbranded”** means a transgenic and genetically modified cotton seed,-

(i) If it is a substitute for or resembles in a manner likely to deceive, other variety of transgenic and genetically modified cotton seed under the name of which it is sold, and is not plainly and conspicuously labeled so as to indicate its true nature; or

(ii) If it is falsely stated to be the produce of any place or country; or

(iii) If it is sold by a name which belongs to another kind or variety of seed; or

(iv) If false claims are made for it upon the label or otherwise; or

(v) If when sold in a package which has been sealed or prepared by or at the instance, of the dealer and which bears his name and address, the contents of each package are not conspicuously and correctly stated on the outside thereof within the limits of variability prescribed under this Act; or

(vi) If the package containing it or the label on the package bears any statement, design or device regarding the quality of cotton seeds contained therein, which is false or misleading in any material particular or if the package is otherwise deceptive with respect of its contents; or

(vii) If it is not registered in the manner required by or under this Act; or

(viii) If its label does not contain a warning or caution which may be necessary, and sufficient, to be complied with, to prevent risk to human beings or animals; or

(ix) If the package containing it or the label on the package bears the name of a fictitious individual or company as the dealer of the kind or variety; or

(x) If it is not labeled in accordance with the requirement of this Act or rules made there under.

(9) "**Notification**" means a notification published in the Official Gazette and word notified shall be construed accordingly;

(10) "**Price fixation committee**" means the Price fixation committee constituted under section 13;

(11) "**Producer**" means a person, group of persons, firm or company or organization who grows or organizes the production of transgenic and genetically modified cotton seeds;

(12) "**Seed Analyst**" means a Seed Analyst appointed under section 16 of the Seed Act 1966 (Central Act 54 of 1966);

(13) "**Seed Inspector**" means a Seed Inspector appointed under section 13 of the Seed Act 1966 (Central Act 54 of 1966);

(14) "**State Seed Testing Laboratory**" means a Laboratory established or declared as notified by the Government under sub section(2) of section 4 of the Seed Act 1966 (Central Act 54 of 1966).

(15) "**Sub-standard**" means if it does not meet the prescribed seed standards in respect of the transgenic and genetically modified cotton seed;

(16) "**Spurious seed**" means that which is not genuine or true to its type;

(17) "**Transgenic and Genetically modified cotton seeds**" means seed synthesized or developed by modifying or altering the genetic composition by means of genetic engineering;

(18) "**Variety**" means a plant grouping except micro organism within a single botanical taxon of lowest known rank, which can be:-

(i) defined by the expression of the characteristics resulting from a given genotype of that plant grouping:

(ii) distinguished from any other plant grouping by expression of atleast one of the said characteristics; and

(19) "**Vendor**" means a seller or dealer of transgenic and genetically modified cotton seeds.

**3. Requirements of Labeling Packages.-** (1) Every person shall sell transgenic and genetically modified cotton seeds in accordance with the requirements of this Act.

(2) The label on each package containing transgenic and genetically modified cotton seeds shall display the minimum limits of physical purity, germination, genetic purity standards of Bt protein, seed health, expected performance and yield of the seed in given conditions, applicable terms and conditions, as specified in the notification issued by the GEAC constituted under the Environment (Protection) Act, 1986 for commercial release.

**4. Seed Inspector.-** (1) The seed inspector appointed under section 13 of the Seed Act 1966 (Central Act 54 of 1966) shall be deemed to be seed inspector appointed for the purpose of this Act and he shall exercise the same powers and jurisdiction as per section 14 of the and in section 12 of the Seed (Control) order, 1983 and rule 23 of the Seeds Rules, 1968 and also exercise powers and discharge duties for the purpose specified in this Act.

(2) Every seed inspector shall be deemed to be a public servant within the meaning of section 21 of the Indian Penal Code 45 of 1860 (Central Act) and shall be officially subordinate to such authority as the Government may specify in this behalf.

(3) The Seed Inspector may, on the basis of the order passed by the Commissioner for Agriculture, institute proceed for the prosecution of the producer or dealers, as the case may be, of the said seeds.

**5. Seed Analyst.-** Seed Analyst appointed under section 12 of the Seed Act 1966 (Central Act 54 of 1966) shall exercise the same powers and jurisdiction as per section 16 of the Seed Act 1966 and section 14 of the Seed (Control) order, 1983 and rule 21 of the Seeds Rules, 1968 and exercise powers under this Act for the purposes specified in this Act.

**6. State Seed Testing Laboratory:-** The State Seed testing Laboratory established or declared as notified by the Government under sub section(2) of section 4 of the Seed Act 1966 (Central Act 54 of 1966) shall be deemed to be established for the purpose of this Act also.

(1) The Government may recognize one or more Seed Testing Laboratories as referral Seed Testing Laboratories for the purpose of referral analysis in the manner prescribed.

(2) the Laboratory to which a sample has been sent by a Seed Inspector for analysis shall send the analysis report to the concerned Seed Inspector within thirty days from the date of receipt of the sample to the Laboratory.

**7. Procedure for filing and dealing with Complaints of farmers.-** Any affected farmer may lodge complaint in writing or through e-mail / SMS / electronic media in prescribed manner to the Committee about the poor

germination, susceptibility to pests and diseases, against the claims of seed producers regarding genetic impurity, non-adaptability to the region, failure of transgenic and genetically cotton crop due to spurious or sub-standard quality of transgenic and genetically modified cotton seeds supplied to him. The farmer shall along with the complaint enclose a copy of the bill regarding purchase of seed, seed container along with the marks or labels if any.

**8. Action on receipt of the complaint.-** (1) After receipt of such complaint, the Committee shall direct the Seed Inspector to,-

(a) take a sample of transgenic and genetically modified cotton seeds from the complainant, if available, or shall take samples from the same lot from vendor if available and send the same to the Seed Analyst or Seed Certification Agency for detailed analysis as per provisions of the Act;

(b) Inspect the field of the complainant and record the necessary data;

(2) The Seed Inspector shall after such inspections prepare a preliminary inspection report in the prescribed manner and forward within fifteen days to the District Level Committee for conducting a detailed investigation.

**9. Investigation Committee and its role:-** (1) The Government may by notification, constitute a Committee called the District Level Investigation Committee for assessment and evaluation of crop losses sustained by the farmers due to poor germination, susceptibility to pests and diseases, genetic impurity or non-adaptability of transgenic and genetically modified cotton seed.

(2) The committee shall consists of the following members:-

| | | |
|---|---|---|
| 1. | The Chief Executive Officer, Zilla Panchayat of the District. | Chairman |
| 2. | The Joint Director of Agriculture of the concerned District | Member Secretary |
| 3. | Tahsildar of the concerned taluka. | Member |
| 4. | The Assistant Director of Agriculture, Seed Testing Laboratory of concerned District jurisdiction. | Member |
| 5. | One Scientist dealing with the cotton crop from the jurisdictional State University of Agricultural Sciences nominated by Government | Member |
| 6. | Assistant Director of Agriculture of the concerned Taluka. | Member |
| 7. | President of the concerned Taluka Krishik Samaj. | Member |

3

(3) On the basis of preliminary report of the Seed Inspector, and the seed Analyst report, the Committee shall visit within seven days and prepare a detailed report of its findings in the prescribed manner and forward the same to the Deputy Commissioner of the concerned District for recording his remarks and further forwarding it to the Commissioner for Agriculture.

(4) The Committee while estimating the loss of the farmer shall consider the following factors, namely:-

(i) In case of poor germination due to defect in the seed and not because of poor soil condition or moisture stress and improper package of practices etc, the loss shall be calculated considering the cost of the seed and cost of cultivation till sowing per hectare as decided by the concerned University of Agricultural Sciences.

(ii) In case of failure of required degree of resistance to pests and diseases as per specific claim made by the seed producer, the loss shall be calculated considering additional expenditure incurred on plant protection measures and estimated crop losses due to failure of resistance to pests or diseases.

(iii) In case of failure of genetic impurity and non-adaptability, the loss shall be calculated considering the cost difference in yield of the crop in question and that of expected yield of transgenic and genetically modified cotton crop in the locality.

**10. Compensation:-** (1) The Commissioner for Agriculture shall, after taking into consideration the report of the Committee, the Deputy Commissioner and after giving an opportunity to be heard, pass an order within 30 days to the seed producer to pay such compensation according to the percentage of assessed crop loss as he may specify to the affected farmer.

(2) The Seed Producer shall pay to the farmer such compensation awarded by the Commissioner for Agriculture subject to the provisions of Section 11, within a period of thirty days from the date of receipt of the order of compensation or

(3) In case of delayed payment, 24 per cent interest per annum shall be levied; and

(4) When the seed producer fails to pay compensation, the same shall be recovered as an arrears of Land Revenue in the same manner arrears of land revenue is recovered in accordance with Karnataka Land Revenue Act 1964 and rules made there under, and compensation shall be remitted to the farmer's account.

**11. Appeal.** - (1) Any person aggrieved by the decision of the Commissioner for Agriculture may appeal to the Principal Secretary/Secretary, Agriculture Department, Government of Karnataka, within thirty days from the date on which the decision of the award of compensation is communicated to him in such manner along with such fee as may be prescribed and the decision of the Appellate Authority shall be final:

Provided that, Appellate Authority may entertain the appeal after expiry of said period of thirty days, after satisfying that the appellant was prevented by sufficient causes from filing appeal in time.

(2) On receipt of an appeal under sub section (1) the Appellate authority shall after giving the appellant an opportunity of being heard dispose off the appeal as expeditiously as possible but not later than sixty days from the date of filing the appeal.

(3) Every order of the Appellate Authority under this section shall be final.

**12. Penalties.-** Any person/Agency/other corporate body Director/ Manager /Secretary or any other Officer /Agent thereof shall unless he proves that the contravention took place without his knowledge or that he exercised all due diligence to prevent such contravention, be deemed to be guilty of such contravention and shall on conviction, be punishable with imprisonment for a term which may extend to three years or with fine which may extend to Rupees Ten lakhs or with both.

**13. Constitution of Committee for Price fixation.-** (1)The Government may, by notification, appoint a Committee called price fixation committee for fixation of price of transgenic and genetically modified cotton seed.

(2) The committee shall consist of the following members, namely:-

| | | |
|---|---|---|
| 1. | The Director of Agriculture | Chairman |
| 2. | The Senior most Cotton Breeder from UAS Dharwad | Member |
| 3. | The Senior most Cotton Agronomist from UAS Dharwad | Member |
| 4. | The President of the Private Cotton Seed producers association | Member |
| 5. | The Additional Director of Agriculture (Organic Farming) | Member Secretary |

(2) The Price fixation Committee may advise the Government in fixing the price after taking into consideration, costs of production etc., including trait value wherever necessary obtained from various agencies concerned. The Government, may fix maximum sale price before commencement of the

season for transgenic and genetically modified cotton seed, by notification, on the recommendation of price fixation committee.

(3) The price fixation Committee shall meet once in a year and submit the report to the Government.

Provided that, price fixation committee may, if necessary meet as and when required.

(4) No person shall sell the seeds over and above the maximum selling price fixed by the Government under sub section (2).

(5) If any person, - contravenes the provisions of sub section (4), shall on conviction, be punishable,-

(i) for the first offence with fine which may extend to Rs. 50,000; and

(ii) in the event of second offence, by such person having been previously convicted of an offence under this section, with imprisonment for a term which may extend to three years, or with fine which may extend to one lakh rupees, or with both.

**14. Power to give Directions.-** The Government may give such directions, as it may appear to be necessary, for carrying the purposes of this Act, to any officer of the Department of Agriculture. It shall be duty of such officer to carry out the same.

**15. Exemption.-** Nothing in this Act shall apply to any cotton seed grown by a farmer and sold or delivered by him on his own premises directly to another farmer for being used by that farmer for the purpose of sowing.

**16. Offences by companies.-** (1) Where an offence under this Act has been committed by a company, every person who at the time the offence was committed was in charge of, and was responsible to, the company for the conduct of the business of the company, as well as the company, shall be deemed to be guilty of the offence and shall be liable to be proceeded against and punished accordingly:

Provided that nothing contained in this sub-section shall render any such person liable to any punishment under this Act if he proves that the offence was committed without his knowledge and that he exercised all due diligence to prevent the commission of such offence.

(2) Notwithstanding anything contained in sub-section (1), where an offence under this Act has been committed by a company and it is proved that the offence has been committed with the consent or connivance of, or is attributable to any neglect on the part of, any director, manager, secretary or other officer shall also be deemed to be guilty of that offence and shall be liable to be proceeded against and punished accordingly.

**Explanation.-** For the purposes of this section,-

(a) "Company" means anybody corporate and includes a firm or other association of individuals; and

(b) "Director", in relation to a firm, means a partner in the firm.

**17. Cognizance of Offences.-** No court shall take Cognizance of offence punishable under this Act, except on a report in writing of the facts constituting such offence made by the Director of Agriculture or any other authority authorized by him.

**18. Power to make rules.-** (1) The Government may, by notification in the official Gazette, after previous publication, make necessary rules to carry out the purposes of this Act.

(2) Every rule made under this Act shall immediately after it is made, be laid before each House of the State Legislature if it is in session and if it is not in session, in the session immediately following, for a total period of fourteen days which may be comprised in one session or in two successive sessions, and if, before the expiration of the session in which, it is so laid or the session immediately following, both Houses agree in making any modification in the rule or in the annulment of the rule, the rule shall, have effect only in such modified forms or shall stand annulled, as the case may be, so however, that any such modification or annulment shall be without prejudice to the validity of anything previously done under that rule.

**19. Protection of Action taken in Good faith.-** (1) No suit, prosecution or other legal proceeding shall lie against any person for anything which is in good faith done or intended to be done in pursuance of any order issued under this Act.

(2) No suit or other legal proceedings shall lie against the State Government, or any other person in respect of any damage which is done in good faith or intended to be done in pursuance of any order issued under this Act.

**20. Removal of difficulties.-** If any difficulty arises in giving effect to the provisions of this Act, the State Government may by notification, make such provision not in consistent with the provisions of this Act, as appear to it to be necessary or expedient for removing the difficulty:

Provided that no such order shall be issued after the expiry of two years from the date of commencement of this Act.

## STATEMENT OF OBJECTS AND REASONS

At present there are no provisions in the present Seed laws to fix price for transgenic and genetically modified cotton seeds and payment of compensation in case of crop failure of such cotton seeds in the State. As a result, the vendor and producers of transgenic and genetically modified cotton seed are exploiting poor farmers by collecting exorbitant prices from the farmers. Further as there is no provisions in the present Seed Laws to pay compensation to farmers in case of crop failure due to defective/sub standard transgenic and genetically modified cotton seeds, the farmers face problems and incur financial loss.

Hence, it has become imperative on the part of the State in the interest of the farmers in the State to fix sale price of transgenic and genetically modified cotton seeds and also make provisions to compensate farmers in case of failure of transgenic and genetically modified cotton crops by fixing the responsibility on the concerned seed producer to compensate farmers suitably thus mitigating their hardship. Evolve adequate and effective mechanism to prove the quality of the transgenic and genetically modified cotton seed.

During Kharif 2013, when instances of transgenic and genetically modified cotton crop failure in an area of 60,450 ha. in the districts of Haveri, Dharwad, Gadag, Belgaum, Chitradurga, Davanagere and Bellary. It was very difficult to provide compensation to the aggrieved farmers, as there was no adequate provisions in the existing laws to compensate the aggrieved farmers, in case of crop failure. As a special case, the State Government has compensated the farmers to the tune of Rs. 36.35 crores.

The present Seed Laws implemented in the State are enacted by the Central Government. Hence amendments in this regard and other lacunae to the present Central Seed Legislation were proposed by the State Government to the Central Government during last two decades, but it is yet to be passed.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

## MEMORANDUM REGARDING DELEGATED LEGISLATION

| | |
|---|---|
| **Clause 2:** | (i) Item (v) of sub-clause (8) empowers the State Government to prescribe by rules the limits of variability of cotton seed.<br>(ii) Item (x) of sub-clause (8) empowers the State Government to make rules regarding the manner of labeling. |
| **Clause 6:** | Sub-clause (1) empowers the State Government to make rules regarding the manner in which the referral cotton seed testing laboratories may be recognized for referral analysis. |
| **Clause 11:** | Sub-clause (1) empowers the State Government to make rules regarding the manner of communicating the award of compensation by the Appellate Authority and fees payable by the Aggrieved person. |
| **Clause 18:** | Sub-clause (1) empowers the State Government to make rules to carry out the purposes of the Act. |

The proposed delegation of legislative power is normal in character.

**KRISHNA BYREGOWDA**
State Minister for Agriculture

**M. GURURAJA**
Secretary
Karnataka Legislative Assembly

Government Press, Vikasa Soudha, Bengaluru, P7, W.D. , Copies 750, 31st, 2015